2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

| | |
|---|---|
| ಎಸ್ ಸಿಃ | 245 / 18 |

| | | |
|---|---|---|
| ಸಾಕ್ಷಿದಾರರ ಹೆಸರು | ಆನಂದ | |
| ತಂದೆಯ ಹೆಸರು | ಚಂದ್ರೇಗೌಡ | ಸಾಕ್ಷಿಗೆ ದಿಃ 04.07.2019 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು. |
| ವಯಸ್ಸು | 34 ವರ್ಷ | |
| ಉದ್ಯೋಗ | ಚಾಲಕ | ಪಿ ಡಬ್ಲ್ಯೂ - 02 |
| ವಾಸ ಸ್ಥಳ | ಜೈಯನಗರ ಮೈಸೂರು | ಸಿ ಡಬ್ಲ್ಯೂ - 21 |

ಮುಖ್ಯ ವಿಚಾರಣೆ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-

2011 ರಿಂದ ಈವರೆಗೂ ಮೈಸೂರಿನ ಅಪೋಲೋ ಬಿ.ಜಿ.ಎಸ್. ಆಸ್ಪತ್ರೆಯ ಆ್ಯಂಬುಲೆನ್ಸ್ ಚಾಲಕನಾಗಿ ಕೆಲಸ ಮಾಡುತ್ತಿದ್ದೇನೆ. ನಾನು ಕರ್ತವ್ಯ ದಿಃ 24.05.2018 ರ ರಾತ್ರಿ 8.00 ಗಂಟೆಯಿಂದ ದಿಃ 25.05.2018 ರ ಬೆಳಿಗ್ಗೆ 8.00 ಗಂಟೆಯ ತನಕ ಕರ್ತವ್ಯದಲ್ಲಿ ಇದ್ದೆನು, ಚಾಸಾ-20 ಮನು ತಾಮಸ್ ರವರು ಸಹ ಆ ದಿನ ನರ್ಸ ಆಗಿ ರಾತ್ರಿ ಪಾಳಿ ಕರ್ತವ್ಯದಲ್ಲಿ ಇದ್ದರು, ದಿಃ 25.05.2018 ರ ಬೆಳಿಗ್ಗಿನ ಜಾವ 1.10 ನಿಮಿಷಕ್ಕೆ ನಮ್ಮ ಆಸ್ಪತ್ರೆಗೆ ವಿಜಯನಗರದಿಂದ ದೂರವಾಣಿ ಕರೆ ಬಂದಿತ್ತು. ನನಗೆ ಚಾಸಾ-20 ರವರು ವಿಷಯವನ್ನು ತಿಳಿಸಿ ರೋಗಿಯನ್ನು ಕರೆದುಕೊಂಡು ಬರಬೇಕು ಎಂದು ಹೇಳಿದ್ದರು, ನಾನು ಮತ್ತು ಚಾಸಾ-20 ರವರು ನಮ್ಮ ಆಸ್ಪತ್ರೆಯ ಆ್ಯಂಬುಲೆನ್ಸ್ ನಂಬರ್ ಕೆ.ಎ 09 ಸಿ 1549 ರಲ್ಲಿ ವಿಜಯನಗರದ 4 ನೇ ಹಂತ ಬಸವನ ಹಳ್ಳಿಯ ಬಳಿ ಈ ದಿನ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿಯ ಮನೆಗೆ ಹೋದೆವು. ಚಾಸಾ-20 ರವರು ಇಳಿದು ಮನೆಗೆ ಹೋದರು, ನಾನು ಆರೋಪಿಯ ಮನೆಯ ಮುಂದೆ ವಾಹನವನ್ನು ನಿಲ್ಲಿಸಿದ್ದೆನು, ಆರೋಪಿಯ ತಂದೆ ಮನೆಯ ಮುಂದೆ ಇದ್ದರು, ಚಾಸಾ-20 ರವರು ನನಗೆ ಸ್ಟ್ರೆಚರ್ ತರಲು ತಿಳಿಸಿದ ಮೇರೆಗೆ ನಾನು ಸ್ಟ್ರೆಚರ್ ತೆಗೆದುಕೊಂಡು ಹೋದೆನು, ಮನೆಯ ಒಳಗಡೆ ಟೀಪಾಯಿಯ ಬಳಿ ರಕ್ತವು ಚೆಲ್ಲಿತ್ತು ಮತ್ತು ಅಲ್ಲಿ ಸಿಗರೇಟ್ ಪ್ಯಾಕ್, ಮಧ್ಯದ ಬಾಟಲ್ ಹಾಗೂ ಚಿಕನ್ ಬೀರಿಯಾನಿ ಮತ್ತು ತುಂಡುಗಳು ಇದ್ದವು, ಹತ್ತಿರದಲ್ಲಿದ್ದ ಮಂಚದಲ್ಲಿ ಆರೋಪಿಯು ಮಲಗಿದ್ದ. ಚಾಸಾ-20 ರವರು ಆರೋಪಿಯ ಬಳಿ ಇದ್ದರು, ಚಾಸಾ-20 ರವರು ನನಗೆ ಗಾಯಾಳುವನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗೋಣ ಎಂದು ಹೇಳಿದ್ದರು. ಚಾಸಾ-20 ರವರು ನನಗೆ ಸದರಿ ಮನೆಯಲ್ಲಿ ಮೇಲಿನ ಮಹಡಿಯಲ್ಲಿ 2 ಕೊಲೆಗಳಾಗಿವೆ ಎಂದು ಹೇಳಿದರು. ಆರೋಪಿಯನ್ನು ಸ್ಟ್ರೆಚರ್ ಮೇಲೆ ಮಲಗಿಸಿ ಆ್ಯಂಬುಲೆನ್ಸ್ ನಲ್ಲಿ ಇಟ್ಟೆವು, ನಾನು ಆಸ್ಪತ್ರೆಗೆ ಪೋನ್ ಮಾಡಿ ಇನ್ನೊಂದು ಆ್ಯಂಬುಲೆನ್ಸ್ ನ್ನು ತರಲು ಹೇಳಿದೆನು, ನಾವು ಆರೋಪಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋದ ನಂತರ ಪೋಲಿಸರು ಆಸ್ಪತ್ರೆಗೆ

ಬಂದಿದ್ದರು, ಆರೋಪಿಯು ಕುತ್ತಿಗೆಗೆ ಟವೆಲ್ ಸುತ್ತಿಕೊಂಡಿದನು. ಆತನ ಕುತ್ತಿಗೆಯಿಂದ ರಕ್ತ ಬರುತ್ತಿತ್ತು. ಆ ದಿನ ನೋಡಿದ ಗಾಯಾಳು ಈ ದಿನ ನ್ಯಾಯಾಲಯದಲ್ಲಿರುವ ಆರೋಪಿ ಆಗಿರುತ್ತಾನೆ.

ಪಾಟೀ ಸವಾಲುಃ- ಆರೋಪಿಗಳ ಪರ ಶ್ರೀ ವಿ.ಬಿ.ಎನ್. ವಕೀಲರಿಂದ -

ನಾನು ಹೇಳುವಂತೆ ಆರೋಪಿಯ ಮನೆಯಲ್ಲಿ ಮಧ್ಯದ ಬಾಟಲು, ಸಿಗರೇಟ ಪ್ಯಾಕ್ ಮತ್ತು ಬಿರಿಯಾನಿ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋದ ದಿನದಂದು ಪೋಲಿಸರು ಆಸ್ಪತ್ರೆಗೆ ಬಂದಾಗ ನಾನು ಪೋಲಿಸರಿಗೆ ಯಾವುದೇ ವಿಷಯವನ್ನು ತಿಳಿಸಿಲ್ಲ.

ಮರು ವಿಚಾರಣೆಃ- ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮತ್ತು ಎಮ್.ಎ.ಸಿ.ಟಿ.ಮೈಸೂರು